Doc-58
T-P-2

Reg no KRN 14 - For Influential Publicity - 17-9-76

ಸ್ವರ್ಣ ಮಹೋತ್ಸವ ನೆರವೇರಿಸಿ ವಜ್ರಮಹೋತ್ಸವ ನೆರವೇರಿಸಲಿರುವ ಏಕೈಕ

ಸತ್ಯವಾದಿ
SATYAVADI

60th Diamond Jubilee Year
60 ನೇ ವಜ್ರಮಹೋತ್ಸವ ವರ್ಷ
★ Satyavadi Daily . Mysore 4 ★

ಸಂಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್
ಸಂಪಾದಕರು : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್
5 ಪೈಸೆ

ದಕ್ಷಿಣ ಭಾರತೀಯ ಆಡಳಿತ ಭಾಷೆಗಳ ಬಗ್ಗೆ ವಿಚಾರ ಸಂಕಿರಣ

ರಾಜ್ಯದ ಭಾಷೆ ಮತ್ತು ಕನ್ನಡ ಅಭಿವೃದ್ಧಿ ಇಲಾಖೆಯ ಆಶ್ರಯದಲ್ಲಿ ಈ ತಿಂಗಳು 29 ಹಾಗೂ 30 ರಂದು ದಕ್ಷಿಣ ರಾಜ್ಯಗಳ ಆಡಳಿತ ಭಾಷೆಗಳ ಬಗ್ಗೆ ಎರಡು ದಿನಗಳ ವಿಚಾರ ಸಂಕಿರಣವೊಂದು ಮೈಸೂರು ನಗರದ ಆಡಳಿತ ಪ್ರಶಿಕ್ಷಣ ಸಂಸ್ಥೆಯಲ್ಲಿ ನಡೆಯಲಿದೆ. ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸ್ ರವರು ಉದ್ಘಾಟಿಸುವರು.

★

ಕುಟುಂಬ ಕಲ್ಯಾಣ ಪಕ್ಷಾಚರಣೆ

ಅಖಿಲ ಭಾರತ ಮಹಿಳಾ ಸಂಸ್ಥೆಯ ಮೈಸೂರು ಶಾಖೆಯ ಆಶ್ರಯದಲ್ಲಿ ಏರ್ಪಡಿಸಲಾಗಿದ್ದ ಕುಟುಂಬ ಕಲ್ಯಾಣ ಯೋಜನೆ ಪಕ್ಷಾಚರಣೆ 14 ನೇ ತಾ ಉದ್ಘಾಟಿಸಲ್ಪಟ್ಟಿತು.

●

ಮೈಸೂರು ಜಿಲ್ಲಾಧಿಕಾರಿಯವರ ಪ್ರಕಟಣೆ

ಕೊಳ್ಳೇಗಾಲ ತಾಲ್ಲೂಕಿನ ಶ್ರೀ ಮಲೈ ಮಹಾದೇವಸ್ವಾಮಿ ಬೆಟ್ಟಗಳಲ್ಲಿ ಈ ತಿಂಗಳು 22 ರಿಂದ 23 ರ ವರೆಗೆ ಮತ್ತು ಈ ತಿಂಗಳು 26 ರಿಂದ ಮುಂದಿನ ತಿಂಗಳು 3 ನೇ ತಾ. ವರೆಗೆ ಈ ವರ್ಷದ ಜಾತ್ರೆಗಳು ನಡೆಯುವುವು ಜಾತ್ರೆಗಳಿಗಾಗಿ ವ್ಯವಸ್ಥೆಗಳು ಆಗಬೇಕು ಎಂದು ಮೈಸೂರು ಜಿಲ್ಲಾಧಿಕಾರಿಯವರು ಪ್ರಕಟಣೆ ಹೊರಡಿಸಿರುವರು. ಈ ಸಂಬಂಧವಾಗಿ ವ್ಯವಸ್ಥೆಗಳನ್ನು ಕೈಗೊಳ್ಳಲು ಮೈಸೂರು ಜಿಲ್ಲಾಧಿಕಾರಿಯವರು ಇಡೀ ಕೊಳ್ಳೇಗಾಲ ತಾಲ್ಲೂಕನ್ನು ಕಾಲರಾ ಬೆದರಿಕೆಯಿಂದ ಕೂಡಿದ ಪ್ರದೇಶವೆಂದು ಸಾರಿದ್ದಾರೆ.

★

ರೈಲ್ವೆ ನೌಕರರಿಗೆ ಕುಟುಂಬ ಯೋಜನೆ

ಮದ್ದೂರಿನಿಂದ ಬಂದಿರುವ ವರದಿಯಂತೆ ಶಿವಪುರದಲ್ಲಿರುವ ದಕ್ಷಿಣ ರೈಲ್ವೆ ಕೆಲಸಗಾರರ ಸಂಘದ ಕಾರ್ಯಾಚರಣೆ ವಿಭಾಗದವರು ತಮ್ಮ ಹಾಗೂ ದೇಶದ ಹಿತ ದೃಷ್ಟಿಯಿಂದ ಕುಟುಂಬ ಯೋಜನೆ ಕೈಗೊಳ್ಳಲು ನಿರ್ಧರಿಸಿದ್ದಾರೆ.

○

ಮಕ್ಕಳಿಗೆ ಬಹುಮಾನ ನೀಡಿಕೆ

ಮೈಸೂರು — ಈ ತಿಂಗಳು 25 ನೇ ತಾ ಉದ್ಘಾಟನೆ ಆಗುವ ಜಿಲ್ಲಾ ಮಟ್ಟದ ಅಂಚೆ ಚೀಟಿ ಪ್ರದರ್ಶನಕ್ಕೆ ಭೇಟಿ ಕೊಡುವ ಮಕ್ಕಳಿಗೆ ವಿಶೇಷವಾಗಿ 26 ನೇ ತಾ. ಸಣ್ಣ ಬಹುಮಾನ ಕೊಡಲಾಗುವುದು ಈ ಬಹುಮಾನ ಹಂಚಿಕೆ ದಾಸ್ತಾನು ಇರುವ ವರೆಗೆ.

●

ಭಾರತ ರೈಲ್ವೆಯು ತನ್ನ 123 ವರ್ಷಗಳ ಅಸ್ತಿತ್ವದಲ್ಲಿ ಸಾಕಷ್ಟು ಮುನ್ನಡೆದಿದೆ ಇಂದು ಭಾರತೀಯ ರೈಲ್ವೆ ಇಡೀ ಏಷ್ಯದಲ್ಲೇ ಅತ್ಯಂತ ದೊಡ್ಡದು ಮತ್ತು ನಾಲ್ಕನೆಯದು ಹತ್ತು ಸಾವಿರಕ್ಕೂ ಹೆಚ್ಚು ರೈಲುಗಳು ಪ್ರತಿ ದಿನ ಏಳು ಲಕ್ಷ ಪ್ರಯಾಣಿಕರು ಮತ್ತು 5 ವರೆ ಲಕ್ಷ ಟನ್ ಸರಕನ್ನು ಮೂಲೆಮೂಲೆಗೆ ಒಯ್ಯುತ್ತದೆ.

ಆರ್ಥಿಕ ಖಾನೇಷುಮಾರಿ ವ್ಯವಸ್ಥೆ

ನವ ದೆಹಲಿ — ಅವ್ಯವಸ್ಥಿತ ವೃತ್ತಿಗಳಲ್ಲಿಯ ಚಟುವಟಿಕೆ, ಅವುಗಳ ಸ್ಥಾಪನೆ ರೀತಿ, ಕಾರ್ಯಕ್ರಮ ನಿರ್ಧರಿಸಲು ದೇಶದ ಅದ್ಯಂತ ಆರ್ಥಿಕ ಸೆನ್ಸಸ್ ನಡೆಸಲಾಗುವದು

○

5 ನೇ ಯೋಜನೆ ಕಡೆಯ ವರೆಗೆ

ಬೆಂಗಳೂರು — 5 ನೇ ಯೋಜನೆಯ ಕಡೆಯ ವರೆಗೆ ಶಿಶುವಿಹಾರ ಉಪಾಧ್ಯಾಯರ ಹಾಗೂ 350 ಭಾಗಶಃ ಕಾಲದ ಆಯಾಗಳನ್ನು ಒಳಗೊಂಡ 50 ಪ್ರಿ-ಪ್ರೈಮರಿ ಕೇಂದ್ರಗಳನ್ನು ಸರ್ಕಾರ ಮಂಜೂರ್ ಮಾಡಿದೆ ಇದಕ್ಕಾಗಿ ಮುಂದಿನ ಸಾಲಿನಲ್ಲಿ ರಿಕರಿಂಗ್ ರೂ. 166500 ಮತ್ತು ನಾನ್ ರೆಕರಿಂಗ್ ಖರ್ಚು ರೂ. 1 ವರೆ ಲಕ್ಷ ಮಂಜೂರ್ ಮಾಡಿದೆ.

○

ಜೀತದಿಂದ ವಿಮುಕ್ತಿ

ನವ ದೆಹಲಿ — ತಮಿಳುನಾಡಿನ ಸೇಲಂ ಮತ್ತು ದಕ್ಷಿಣ ಆರ್ಕಾಟು ಜಿಲ್ಲೆಯ 3 ಜಹಗೀರುದಾರರಿಗೆ ಜೀತ ಪದ್ಧತಿ ಪ್ರಕಾರ ಗುಲಾಮರಾಗಿದ್ದ 5 ಸಾವಿರ ಕುಟುಂಬದ 25 ಸಾವಿರ ಮಂದಿ ಬಿಡುಗಡೆ ಆದರು ಕಲ್ರಾಯನ ಬೆಟ್ಟದಲ್ಲಿ ವಾಸಿಸುತ್ತಿದ್ದ ಅವರು ನಾಗರೀಕತೆ ಕಾಣರು ಅಲ್ಲಿ ವೈದ್ಯರಿಲ್ಲ ರಸ್ತೆ ಅಥವಾ ಇನ್ನಾವುದೇ ಸಂಪರ್ಕ ಇಲ್ಲ

ಕಳೆದುಹೋದ ಲಾಟರಿ ಟಿಕೇಟು

ಮದರಾಸು — 1971 ರ ಪೊಂಗಲ್ ಲಾಟರಿಯಲ್ಲಿ 2 ನೇ ಬಹುಮಾನ ರೂ. 5 ಲಕ್ಷ ಬಹುಮಾನ ಪಡೆದ ಸುಸಾಯಿ ಎಂಬ ಉಪಾಧ್ಯಾಯರ ಟಿಕೇಟು ಹಾಳಾಗಿ ಹೋಯಿತು — ಟಿಕೇಟು ಹಾಜರ್ ಮಾಡದೆ ಬಹುಮಾನದ ಹಣ ಕೊಡುವುದಿಲ್ಲವೆಂದು ಡೈರೆಕ್ಟರು ತಿಳಿಸಲು ಕೋರ್ಟಿನಲ್ಲಿ ಮೊಕದ್ದಮೆ ಹೂಡಿ ಸೂಕ್ತ ಸಾಕ್ಷ್ಯ ಒದಗಿಸಿ ಇವರದೇ ಟಿಕೇಟೆಂದು ಕೋರ್ಟಿನ ಡಿಕ್ಲರೇಷನ್ ಪಡೆದರು — ಅದರೂ ಬಹುಮಾನ ದೊರೆಯದಿರಲು, ಹೈ ಕೋರ್ಟಿನಲ್ಲಿ ರಿಟ್ ಅರ್ಜಿ ಬಹುಮಾನ ಸಲ್ಲಿಸುವಂತೆ ಆಜ್ಞೆ ಪಡೆದರು.

○

ರಾಜಕೀಯ ಸುಧಾರಣಾ ಮಸೂದೆ

ಸ್ಪೇನಿನ ಕಮ್ಯೂನಿಸ್ಟ್ ಪಾರ್ಟಿಯು ಸರಕಾರದ ರಾಜಕೀಯ ಸುಧಾರಣಾ ಮಸೂದೆಯನ್ನು " ಪ್ರಜಾಪ್ರಭುತ್ವದ ವಿರುದ್ಧ " ಎಂದು ತಿರಸ್ಕರಿಸಿತು

★

ವಾರ್ತಾ ಮಂತ್ರಿಗಳು

ಮೈಸೂರು — ರಾಜ್ಯದ ವಾರ್ತಾ ಮತ್ತು ವಿದ್ಯುತ್ ಖಾತೆ ಮಂತ್ರಿಗಳು ಶ್ರೀ ಸುಬ್ಬಯ್ಯಶೆಟ್ಟಿಯವರು ತಾ 18 ಸಂಜೆ ಮಹಾರಾಜಾ ಕಾಲೇಜಿನ ದಕ್ಷಿಣ ಕನ್ನಡ ವಿದ್ಯಾರ್ಥಿ ಸಂಘದ ಬೆಳ್ಳಿ ಹಬ್ಬ ಸಮಾರಂಭನ್ನು ಉದ್ಘಾಟಿಸುವರು.

★ Nehru Centre Race-Days ★

At MYSORE RACE COURSE

SATURDAY 18 th September 1976
— and —
SUNDAY 19th September
(The Nehru Centre Gold Cup
The Indian Express Gold Cup)

ವೃತ್ತಿ ತೆರಿಗೆ

ಬೆಂಗಳೂರು — ರಾಜ್ಯದಲ್ಲಿ ಈ ವರ್ಷ ವೃತ್ತಿ ತೆರಿಗೆಯಿಂದ ನಾಲ್ಕು ಕೋಟಿ ರೂ.ಗಳು ಸಂಗ್ರಹವಾಗುವುದೆಂದು ನಿರೀಕ್ಷಿಸಲಾಗಿದೆ ; ಈ ಬಗ್ಗೆ ಜುಲೈ ಅಂತ್ಯದವರೆಗೆ 29 ಲಕ್ಷ ರೂ ಗಳನ್ನು ಸಂಗ್ರಹಿಸಲಾಗಿದೆ.

★

ನಡುನೀರಲ್ಲಿ

ಇಟಲಿಯ ಭಾರಿ ಪಟ್ಟಣಗಳಲ್ಲಿ ಒಂದಾದ ಜಿನೋವಾ ಇಂದು ದಿವಾಳಿಯ ಸ್ಥಿತಿಯಲ್ಲಿದೆ. ನಗರದ ಉಪಮೇಯರ್ ಫ್ರಾಂಕೊ ಮಾಂಟೆವರ್ಡ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡುತ್ತಾ, ನಗರ ಸಭೆಯ ನೌಕರರಿಗೆ ಸಂಬಳ ಕೊಡಲು ಸಾಧ್ಯವಾಗದು ಎಂದಿರುವರು ; 1973 ರಿಂದ ಜಿನೋವಾ ನಗರವು ಇಟಲಿಯ ಸರ್ಕಾರದಿಂದ 95000 ಮಿಲಿಯ ಲಿರಾಗಳನ್ನು ಪಡೆಯಬೇಕಾಗಿತ್ತು, ಆದರೆ ಅದು ಬರಲಿಲ್ಲ ; ಈ ಮಧ್ಯೆ ನಗರ ಸಭೆಯ ಖರ್ಚುಗಳು ಮತ್ತು ಸಾಲಗಳು ಬೆಳೆಯುತ್ತಲೇ ಇವೆ.

★

ಪ್ರವೇಶ ಶುಲ್ಕ

ಫಿಲಿಪ್ಪೀನ್ಸ್‌ನ ಉತ್ತರ ಭಾಗದಲ್ಲಿರುವ ಕ್ಯಾಂಡಲೇರಿಯಾ ನಗರದ ಸೌಂದರ್ಯ ಸ್ಪರ್ಧೆ ಯೋಜಕರು ಅದರಿಂದ ಒಂದಿಷ್ಟು ಪ್ರತ್ಯಕ್ಷ ಪ್ರಯೋಜನವನ್ನು ಪಡೆಯಬೇಕೆಂದು ಆಲೋಚಿಸಿದರು ; ಇದಕ್ಕಾಗಿ ಅವರು ಅಂತಿಮ ಸೌಂದರ್ಯ ಸ್ಪರ್ಧೆಯಲ್ಲಿ ಅರ್ಹತೆ ಪಡೆಯುವುದಕ್ಕಾಗಿ ಪ್ರತಿಯೊಬ್ಬರೂ 20000 ಇಲಿ ಬಾಲಗಳನ್ನು ಹಾಜರುಪಡಿಸಬೇಕೆಂದು ಸೂಚಿಸಿದರು : ಮತ್ತೆ ಅದೇ ಕಾಲಕ್ಕೆ ಪಟ್ಟಣವು ಇಲಿಗಳ ಕಾಟದಿಂದಲೂ ಮುಕ್ತವಾಗುತ್ತಿದೆ !

Help The 'Gorakshana'

ಭಾರತದಲ್ಲಿ ಗೋವಧೆ ಪೂರ್ಣ ನಿಶೇಧವಾಗಲಿ

ವಜ್ರಮಹೋತ್ಸವ

ಭಗವಂತನ ಕೃಪೆಯಿಂದ " ಸತ್ಯವಾದಿ " ಯು 60 ನೇ ವರ್ಷ ಅರ್ಥಾತ್ ವಜ್ರಮಹೋತ್ಸವ ವರ್ಷವನ್ನು ಪ್ರವೇಶಿಸಿರುವುದೆಂಬುದನ್ನು ತಿಳಿಸಲು ಹರ್ಷಿಸುತ್ತೇವೆ.

ಸ್ವರ್ಣಮಹೋತ್ಸವ ಕಾಲದಲ್ಲಿ ದೊರೆತ ಶ್ರೀ ಜಗದ್ಗುರುಗಳವರ, ಶ್ರೀ ಸ್ವಾಮಿಗಳವರ ಆಶೀರ್ವಾದ ಅನುಗ್ರಹವನ್ನು, ಉದಾರತೆಯಿಂದ ಕೂಡಿದ ಮಹನೀಯರ ನೆರವನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಿಕೊಂಡು, ರಾಜ್ಯದ ಪ್ರಪ್ರಥಮ ವಜ್ರಮಹೋತ್ಸವದ ಯಶಸ್ವಿ ನೆರವೇರುವಿಕೆಗೆ ಪೂರ್ಣ ಸಹಾಯ ದೊರೆಯುವುದೆಂಬ ವಿಶ್ವಾಸ ಹೊಂದಿದ್ದೇವೆ

Contribute Liberally to the National Defence Fund

Protect the Cow

ವುಡ್‌ಲ್ಯಾಂಡ್ಸ್ 17 9 76 ರಿಂದ
ಅಮೋಘ 3 ನೇ ವಾರ
ದಸ್ ನಂಬರಿ
ಹಿಂದಿ
ಕಲರ್
ಮನೋಜ್ ಕುಮಾರ್ ಹೇಮಮಾಲಿನಿ
ಪ್ರೇಮನಾಥ್ ಪ್ರಾಣ್‌ಮುಂತಾದವರ ಅಭಿನಯ
ದಿನ 3 ಪ್ರದರ್ಶನಗಳು

ಅಪೆರಾ 17 9 76 ರಿಂದ
ವಿಜಯವಾಣಿ
ಶ್ರೀನಾಥ್ ಕಲ್ಪನ ದ್ವಾರಕೀಶ್ ರಾಜಾಶಂಕರ್ ಅಭಿನಯ
ಕನ್ನಡ ತೆರಿಗೆ ವಿನಾಯಿತಿ ಪ್ರತಿ ದಿನ 3 ಪ್ರದರ್ಶನಗಳು.

SHAKTI
SUDHA

A Superb Tonic

Edited Printed and Published by Dharmapracharanirata M. S. Krishna Rao (Proprietor) at the Satyavadi Press, Chamarai
Mysore 4